

# ಆಹಾ.. ನೈದಿಲೆಗಳ ಕೊಳ!



ಹಾಗೆ ಸುಮ್ಮನೆ ಕಲ್ಪನೆ ಮಾಡಿಕೊಳ್ಳಿ. ನೀವೊಂದು ಸರೋವರದಲ್ಲಿ ದೋಣಿ ವಿಹಾರ ಮಾಡುತ್ತೀರ, ಅಲ್ಲಿ ಎಷ್ಟು ದೂರಕ್ಕೆ ಕಣ್ಣು ಹಾಯಿಸುತ್ತೀರೋ ಅಲ್ಲೆಲ್ಲಾ ನೈದಿಲೆ ಪುಷ್ಪಗಳು ತೇಲಾಡುತ್ತಿರುತ್ತವೆ. ಆದರೆ ಇದೆಲ್ಲಾ ಬರೀ ಕನಸಿನಲ್ಲಿ ಮಾತ್ರ ಎಂದೆನಿಸಬಹುದಲ್ಲವೇ? ನೀವು ಥಾಯ್ಲೆಂಡ್ ಉಡೋನ್ ಥಾನಿ ಪ್ರಾಂತ್ಯದ ಕುಂಫಾವಾಪಿ ನಗರದಲ್ಲಿರುವ ವಿಶಿಷ್ಟ ಸರೋವರಕ್ಕೆ ಭೇಟಿಯಿತ್ತರೆ ನಿಮ್ಮ ಕಲ್ಪನೆ ದಿಟವಾಗುವುದು ನೂರಕ್ಕೆ ನೂರು ಖಂಡಿತ!

ಕೆಂಪು ಕಮಲಗಳ ಸಮುದ್ರ, ಕೆನ್ನೈದಿಲೆಗಳ ಕೊಳ ಎಂಬ ಹೆಸರಿರುವ ಈ ಸರೋವರವನ್ನು ಸ್ಥಳೀಯರು ನಾಂಗ್ ಹ್ಯಾನ್ ಕುಂಫಾವಾಪಿ ಎನ್ನುತ್ತಾರೆ. ಇದು 8000 ಎಕರೆಗಳಷ್ಟು ಜಾಗವನ್ನು ಆವರಿಸಿಕೊಂಡಿದೆ. ಉಡೋನ್ ಥಾನಿ ಪ್ರಾಂತ್ಯದ ಜೀವನದಿಯಾಗಿರುವ ನಾಮ ಪಾವೂ ನದಿಗೆ ಇದು ಪ್ರಮುಖ ನೀರಿನ ಸೆಲೆಯೂ ಆಗಿದೆ. ಈ ಸರೋವರವು ಒಂದು ಮೀಟರ್‌ಗಿಂತ ಹೆಚ್ಚೇನು ಆಳವಿಲ್ಲ. ಹೆಸರಿಗೆ ಮಾತ್ರ ಕೆಂಪು ಕಮಲಗಳ ಸಮುದ್ರ ಎಂದು ಕರೆಸಿಕೊಳ್ಳುವ ಇಲ್ಲಿ, ಸಾವಿರಾರು ದಟ್ಟ ಗುಲಾಬಿ ವರ್ಣದ ನೈದಿಲೆಗಳು ಬೆಳಗಿನ ಬಿಸಿಲಿಗೆ ಬಿರಿದು ನಿಂತಾಗ ಇದರ ಮೇಲ್ಮೈ ಚಿತ್ರಣವೇ ಬೇರೆಯದ್ದಾಗಿ ರೊಮ್ಯಾಂಟಿಕ್ ಲೋಕವೇ ಕಣ್ಮುಂದೆ ತೆರೆದುಕೊಳ್ಳುತ್ತದೆ!

ನವೆಂಬರ್‌ನಿಂದ ಫೆಬ್ರುವರಿವರೆಗೂ ನೈದಿಲೆಗಳ ಸೊಬಗಿಗೆ ಸಾಕ್ಷಿಯಾಗುವ ಈ ಸರೋವರವು ಡಿಸೆಂಬರ್‌ನಲ್ಲಿ ಸಂಪೂರ್ಣವಾಗಿ ಅರಳಿರುವ ಗಾಢ ವರ್ಣದಲ್ಲಿ ಹೊಳೆಯುವ ನೈದಿಲೆಗಳಿಂದ ಆವರಿಸಿ ಇನ್ನೂ ಹೆಚ್ಚಿನ ಸೌಂದರ್ಯದಿಂದ ಕಂಗೊಳಿಸುತ್ತದೆ. ಪ್ರವಾಸಿಗರು ದಿನವಿಡೀ ಇಲ್ಲಿ ದೋಣಿ ವಿಹಾರ ಮಾಡಬಹುದು. ಮುಂಜಾನೆ 6 ರಿಂದ 11 ಗಂಟೆವರೆಗೆ ರವಿಕಿರಣಗಳ ಬೆಳಕಿನಲ್ಲಿ ನಳನಳಿಸುವ ಹೂವುಗಳನ್ನು ವೀಕ್ಷಿಸಲು ಅತ್ಯಂತ ಸೂಕ್ತ ಸಮಯ.

■ ವಿದ್ಯಾ ವಿ. ಹಾಲಭಾವಿ